ನಾನು ನಗುತ್ತಾ "ಹೂಂ" ಎಂದಷ್ಟೇ ಹೇಳಿ ಸುಮ್ಮನಾದೆ. ಇದ್ದಾರೆ... ಹೇಗಿದ್ದಾರೆ... ಹೋಗುವ ತಯಾರಿ ಮಾಡಿಕೊಳ್ಳುತ್ತಾ ಇದ್ದಾರೆ... ಆದರೂ ಅಡ್ಡಿಯಿಲ್ಲ ಬಂದೋಬಸ್ತಾಗಿ ಇದ್ದಾರೆ ಎಂದು ಹೇಳಬೇಕನ್ನಿಸಿತ್ತು. ಮತ್ತೆ ಅದೊಂಥರಾ ಸುದ್ದಿ ಆದೀತು ಅನ್ನಿಸಿ ಹೇಳಲಿಲ್ಲ. ಅವರೂ ಮುಂದಕ್ಕೆ ಕೇಳಲಿಲ್ಲ.

ಅದಾಗಿ ಸ್ವಲ್ಪ ದಿನಕ್ಕೆ ಸಂಬಂಧಿಯೊಬ್ಬಳು ಗಂಡನ ಜೊತೆ ಜಗಳಾಡಿಕೊಂಡು ಫೋನ್ ಮಾಡಿದ್ದಳು. ಏನು ವಿಷಯ ಅಂತ ಕೇಳಿದರೆ ಅವಳ ಮಾವನಿಗೆ "ಎಂದಿನಂತೆ" ಹುಷಾರಿಲ್ಲ. ಇತ್ತ ಅವಳ ಮಗಳಿಗೂ ಯಾಕೋ ಏನೋ ಮೈನರ್ ಸರ್ಜರಿ ಆಗಿತ್ತು. ನಾಲ್ಕು ಗಂಡುಮಕ್ಕಳಲ್ಲಿ ಕೊನೆಯವನಾದ ಗಂಡ "ಮಗಳದ್ದು ನೀನು ನೋಡಿಕೋ" ಅಂತ ಹೇಳಿ ತನ್ನ ಅಪ್ಪನನ್ನು ನೋಡಲು ನಾಲ್ಕು ದಿನ ಹೋಗಿ ಬರುತ್ತೇನೆ ಅಂತ ಹೊರಟು ನಿಂತಿದ್ದ. ಆದರೆ ಇವಳಿಗೆ ಆ ಗಳಿಗೆಯಲ್ಲಿ ಗಂಡನಿಲ್ಲದೆ ಕೈಕಾಲು ಆಡುವಂತಿರಲಿಲ್ಲ.

"ನಾನೂ ಹೇಳಿದೆ... ಅಲ್ಲೆಲ್ಲಾ ಜನ ಅದಾರು. ಅಯ್ನೋರು (ಅಪರ ಕರ್ಮಗಳನ್ನು ಮಾಡುವವರು) ಅಲ್ಲೇ ಪರಿಚಯದ ಮಂದಿ, ಜಲ್ದಿ ಬರ್ತಾರ. ನಾವು ಇಲ್ಲಿಂದ ಹೋಗಾಕ ಐದಾರು ತಾಸು ಬೇಕು... ಅಲ್ಲೀತನ ಮಾರ್ಚುರಿ ಒಳಗ ಇಟ್ಟಿರತಾರ ನಾವು ಹೋದ ಮ್ಯಾಲೆ ತಗಿಸಿ ಪೂಜಿ ಗೀಜಿ ಮಾಡಿಸಿ ರುದ್ರ ಭೂಮಿಗೆ ಒಯ್ಯದು... ಇನ್ನೂ ಬೇಕಂದ್ರ ಈಗ ಹುಬ್ಬಳ್ಳಿಯಾಗ ಐಸ್ ಬಾಕ್ಸ್ ಸೈತ ಸಿಗತವೆ. ಅದರಾಗ ಇಟ್ಟರೂ ನಡೀತತಿ ಅಂತ..."

"ಅಲ್ಲೇ! ತಡಿಯೆ ತಡಿಯೆ... ಅಷ್ಟ್ ಸೀರಿಯಸ್ಸಾ?"

"ಇಲ್ಲ... ಇನ್ನೂ ಹಂತಾ ಪರಿ ಆಸ್ಪತ್ರಿ ಸೇರಿಲ್ಲ, ಬಚ್ಚಲದಾಗ ತಲಿ ತಿರಿಗಿ ಬಿದ್ರಂತ... ಆದ್ರೂ ಒಂದ್ ನಮೂನಿ ತಯಾರಿ ಮಾಡಿಕ್ಯಂಡ್ರೆ ಚಲೋ ಅಲ್ಲೇನು ಅಂತ... ಯಾವತ್ತರೆ ಒಂದು ದಿನ ಆಗಾದೇ ಅಲ್ಲೇನು?"

ಇನ್ನು ಇಷ್ಟರ ಮಟ್ಟಿಗಿನ ಪ್ರಾಜ್ಞತೆಯನ್ನು ಹೊಂದಿ ಅಂತಲೇ ಅಲ್ಲವೇ ಎಲ್ಲಾ ಅಧ್ಯಾತ್ಮಗಳೂ ಹೇಳುತ್ತಿರುವುದು? ನರಮನುಷ್ಯರು ಹೀಗೆ ಪ್ರಜ್ಞಾವಂತಿಕೆಯ ಉತ್ತುಂಗವನ್ನು ತಲುಪಿಬಿಟ್ಟರೆ ಬಸ್ಸಿಗೆ ಹತ್ತಿ ಮುಂದಿನ ಪಯಣ ಕೈಕೊಂಡ ಹಾಗೆ ಸಾವನ್ನೂ ಸಹಜವಾಗೇ ನೋಡಿಬಿಡಬಹುದು... ಆದರೆ ಆರ್ಥಿಕ ಸಾಮಾಜಿಕ ಹಾಗೂ ಕೌಟುಂಬಿಕ ಪರಿಸ್ಥಿತಿ ಅನುವು ಮಾಡಿಕೊಟ್ಟರೆ ಮಾತ್ರ!


### ಪ್ರೀತಿ ನಾಗರಾಜ

ಒಂದು ಕೈಯಲ್ಲಿ ಕನ್ನಡದಲ್ಲೂ ಇನ್ನೊಂದು ಕೈಯಲ್ಲಿ ಇಂಗ್ಲಿಷ್‌ನಲ್ಲೂ ಬರೆಯುವ ಪ್ರೀತಿ ನಾಗರಾಜ ವೃತ್ತಿಯಿಂದ ಪತ್ರಕರ್ತೆ. ದಾವಣಗೆರೆಯವರು, ಪ್ರಸ್ತುತ ಮೈಸೂರಿನ ನಿವಾಸಿ. ಪತ್ರಿಕೋದ್ಯಮ, ಮನಃಶಾಸ್ತ್ರಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, 'ಡೆಕ್ಕನ್ ಹೆರಾಲ್ಡ್', 'ಇಂಡಿಯನ್ ಎಕ್ಸ್‌ಪ್ರೆಸ್', 'ಸಿಎನ್‌ಬಿಸಿ' ಟೀವಿ ಚಾನೆಲ್‌ಗಳಲ್ಲಿ ಕೆಲಸ ಮಾಡಿರುವ ಅನುಭವಿ. ರಂಗಭೂಮಿ ಮತ್ತು ಸಿನಿಮಾರಂಗದ ಪ್ರಸಿದ್ಧ ಅಭಿನೇತ್ರಿ ಬಿ. ಜಯಶ್ರೀ ಅವರ ಆತ್ಮಕತೆ 'ಕಣ್ಣಾ ಮುಚ್ಚೇ... ಕಾಡೇ ಗೂಡೇ...'ಯ ನಿರೂಪಕಿ. 'ಪ್ರಜಾವಾಣಿ' ಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಪ್ರಕಟಗೊಂಡ 'ಮಿರ್ಚಿ ಮಂಡಕ್ಕಿ' ಅಂಕಣ, ಅದೇ ಹೆಸರಿನಲ್ಲಿ ಪುಸ್ತಕರೂಪದಲ್ಲಿ ಪ್ರಕಟಗೊಂಡಿದೆ.